ಪತ್ರಗಳೇನಾದರೂ ಇವೆಯೆ?"

ಆ ವೃದ್ಧ ತನ್ನ ಎದೆಯೊಳಗಿಂದ ಒಂದು ತುಂಡು ಸುಕ್ಕು ಸುಕ್ಕಾದ ರೇಶಿಮೆಯಂಥ ಹಳೆಯ ಧ್ವಜಸುರಳಿಯನ್ನು ಹೊರತೆಗೆದು, ಅದನ್ನು ಬಿಚ್ಚಿ ಹೇಳಿದ:

"ಪ್ರಮಾಣಪತ್ರಗಳು ಇಲ್ಲಿವೆ. ನಾನು ಈ ಪದಕವನ್ನು 1830ರಲ್ಲಿ ಪಡೆದಿರುವೆ. ಈ ಎರಡನೇಯದು ಸ್ಪ್ಯಾನಿಶ್ ಪದಕ, ಕಾರ್ಲಿಸ್ಟ್ ಯುದ್ಧದಲ್ಲಿ ಭಾಗವಹಿಸಿ ಪಡೆದದ್ದು. ಮೂರನೆಯದು ಫ್ರೆಂಚ್ ಸೈನ್ಯದಳದ ಪದಕ. ನಾಲ್ಕನೆಯದು ಹಂಗೇರಿಯಲ್ಲಿ ಪಡೆದದ್ದು. ಅನಂತರ ನಾನು ದಕ್ಷಿಣ ದೇಶಗಳ ವಿರುದ್ಧ ಅಮೆರಿಕ ಪರವಾಗಿ ಹೋರಾಡಿದೆ. ಅಲ್ಲಿ ಅವರು ಪದಕಗಳನ್ನು ಕೊಡುವುದಿಲ್ಲ."

ಫಾಲ್ಕನ್‌ಬ್ರಿಡ್ಜ್ ಕಾಗದ ಪತ್ರಗಳನ್ನು ಇಸಿದುಕೊಂಡು ಓದತೊಡಗಿದ.

"ಹೂಂ! ಸ್ಕಾವಿನ್‌ಸ್ಕಿ? ಅದು ನಿನ್ನ ಹೆಸರೆ? ಹೂಂ! ಕೋವಿ ಇರಿತದ ಆಕ್ರಮಣಕ್ಕಾಗಿ ಪಡೆದ ಎರಡು ಧ್ವಜಗಳು. ನೀನೊರ್ವ ಶೂರ ಸೇನಾನಿಯಾಗಿದ್ದೆ."

"ನಾನು ದಕ್ಷನಾಗಿದ್ದೇನೆ, ಆತ್ಮನಿಷ್ಠೆಯುಳ್ಳವನಾಗಿದ್ದೇನೆ. ದೀಪಗೃಹದ ಸಂಚಾಲಕನಾಗಲು ಸಮರ್ಥನಾಗಿದ್ದೇನೆ."

"ಪ್ರತಿದಿನ ಹಲವಾರು ಬಾರಿ ದೀಪಗೃಹವನ್ನು ಏರಬೇಕಾಗುತ್ತದೆ. ನಿನ್ನ ಕಾಲುಗಳು ಗಟ್ಟಿಯಾಗಿವೆಯೆ?"

"ನಾನು ಪೂರ್ವ ಹಾಗೂ ಕ್ಯಾಲಿಫೋರ್ನಿಯಾ ಮಧ್ಯದ ಬೆಂಗಾಡು ಪ್ರದೇಶವನ್ನು ಕಾಲ್ನಡಿಗೆಯಲ್ಲೇ ದಾಟಿ ಬಂದಿರುವೆ."

"ನಿನಗೆ ಸಮುದ್ರಯಾನ ಸೇವೆಯ ಪರಿಚಯವಿದೆಯೆ?"

"ಮೂರು ವರ್ಷಗಳವರೆಗೆ ನಾನು ತಿಮಿಂಗಲ ಬೇಟೆಯಾಡುವ ಹಡಗಿನಲ್ಲಿ ಸೇವೆ ಸಲ್ಲಿಸಿರುವೆ."

"ನೀನು ನಾನಾ ಬಗೆಯ ಕೆಲಸಗಳನ್ನು ನಿರ್ವಹಿಸಿರುವೆ."

"ನನಗೆ ಗೊತ್ತಿರದ ಒಂದೇ ಒಂದು ಎಂದರೆ ನೆಮ್ಮದಿ."

"ಅದೇಕೆ?"

ಆ ವೃದ್ಧ ಉದಾಸೀನತೆಯಿಂದ ತನ್ನ ಭುಜಗಳನ್ನು ಹಾರಿಸುತ್ತ, "ನನ್ನ ದೈವವೇ ಅಂಥದ್ದು."

"ಆದ್ದಾಗ್ಯೂ ಈ ದೀಪಗೃಹ ಸಂಚಾಲಕ ಹುದ್ದೆಗೆ ನೀನು ತುಂಬ ವಯಸ್ಸಾದವ ಎಂದೆನಿಸುತ್ತಿದೆ ನನಗೆ."

"ಸರ್" ಉದ್ವೇಗದ ದನಿಯಲ್ಲಿ ಆ ವೃದ್ಧ ತಕ್ಷಣವೇ ಉದ್ಗರಿಸಿದ, "ನಾನು ಬಳಲಿ ಬೆಂಡಾಗಿದ್ದೇನೆ, ಎತ್ತಲೆತ್ತಲೊ ನಿರ್ದಯವಾಗಿ ನೂಕಲ್ಪಟ್ಟಿದ್ದೇನೆ. ನೀವೇ ನೋಡಿದರಲ್ಲ, ನಾನು ಏನೆಲ್ಲ ಸಂಕಷ್ಟಗಳನ್ನು ಎದುರಿಸಿ ಬಂದಿದ್ದೇನೆ. ನನ್ನ ಉತ್ಕಟ ಬಯಕೆಯ ಸ್ಥಳ ಇದೇ ಆಗಿದೆ. ನನಗೆ ವಯಸ್ಸಾಗಿದೆ. ನನಗೆ ವಿಶ್ರಾಂತಿ ಬೇಕಿದೆ. 'ನೀನಿನ್ನು ಇಲ್ಲಿಯೇ ಉಳಿಯಬೇಕು, ಇದು ನಿನ್ನ ಬಂದರು' ಎಂದು ನನಗೆ ನಾನೇ ಹೇಳಿಕೊಳ್ಳಬೇಕಿದೆ. ಸರ್, ಎಲ್ಲವೂ ಇದೀಗ ನಿಮ್ಮ ಕೈಯಲ್ಲಿದೆ. ಇಂಥ ಸ್ಥಳ ನನಗೆ ಇನ್ನೊಮ್ಮೆ ಸಿಗಲಾರದು. ಈ ಮೊದಲು ನಾನು ಪನಾಮಾದಲ್ಲಿ ಇದ್ದಾಗಲೂ ಕೂಡ ನನಗೆ ದೈವ ಕಣ್ತೆರೆಯಲಿಲ್ಲ. ನೀವು ನನ್ನ ಪಾಲಿನ ದೇವರೆಂದು ತಿಳಿದು, ನಿಮ್ಮನ್ನು ಪ್ರಾರ್ಥಿಸುವೆ. ಒಂದೇ ಒಂದು ಬಂದರು ಸಿಗದೆ ದಿಕ್ಕೆಟ್ಟು ಹೋಗಿರುವ ಹಡಗಿನಂತೆ ನಾನು! ಒಂದು ವೇಳೆ ನೀವು ಕೆಲಸ ನೀಡಿ ಈ ವೃದ್ಧನನ್ನು ಸಂತೋಷಪಡಿಸಲು ಇಚ್ಛಿಸುವುದಾದಲ್ಲಿ,